ಒಳಾಂಗಣ ಕ್ರೀಡೆಗಳ ಮೂಲಕ ಕಲಿಕೆಯ ಬಲವರ್ಧನೆ

ಅಕ್ಷತಾ ಎಸ್.ಬೆಳ್ಳೂಡಿ

ಸಾಂಕ್ರಾಮಿಕದ ಕಾಲದಲ್ಲಿ ಬಹುತೇಕ ಮಕ್ಕಳು ಶಾಲೆಗೆ ತೆರಳಲು ಸಾಧ್ಯವಾಗಿರಲಿಲ್ಲ, ಅಲ್ಲದೆ ಹೆಚ್ಚಿನವರನ್ನು ತಲುಪಲು ಆನ್‌ಲೈನ್ ತರಗತಿಗಳು ಪರಿಹಾರವಾಗಿರಲಿಲ್ಲ. ಈ ಸಂದರ್ಭದಲ್ಲಿ ಒಳಾಂಗಣ ಕ್ರೀಡೆಗಳು ಕೇವಲ ಕಲಿಕೆ ಮಾತ್ರವಲ್ಲದೆ, ನಾನಾ ರೀತಿಯ ಬೌದ್ಧಿಕ ಮತ್ತು ಭಾವನಾತ್ಮಕ ಕೌಶಲಗಳನ್ನು ಬೆಳೆಸಲು ಪರಿಣಾಮಕಾರಿ ಮಾರ್ಗವಾಗಿವೆ.

ಮಕ್ಕಳು ತಮ್ಮ ಪರದೆ ಸಮಯ (ಸ್ಕ್ರೀನ್‌ಟೈಮ್)ವನ್ನು ಕಡಿಮೆಗೊಳಿಸಲು ಮತ್ತು ನಾನಾ ಕಲಿಕಾ ಫಲಿತಾಂಶಗಳನ್ನು ಸಾಧಿಸಲು ಪರಿಚಯಿಸಬಹುದಾದ ಕೆಲವು ಕ್ರೀಡೆಗಳನ್ನು ಈ ಲೇಖನ ಪರಿಶೀಲಿಸಲಿದೆ. ಈ ಕ್ರೀಡೆಗಳನ್ನು ನಿರ್ದಿಷ್ಟ ರೀತಿಯಲ್ಲಿ ಹಾಗೂ ಕೆಲವು ನಿಯಮಗಳಿಗೆ ಅನುಗುಣವಾಗಿ ಆಡಬೇಕೆಂದು ವಿನ್ಯಾಸಗೊಳಿಸಿದ್ದರೂ, ಅವು ಮಕ್ಕಳ ಕಲ್ಪನೆ ಅಥವಾ ಶಿಕ್ಷಕರ ಕ್ರಿಯಾಶೀಲತೆಗೆ ಅಡ್ಡಿ ಬರುವುದಿಲ್ಲ. ಜೆಂಗಾದ ಬ್ಲಾಕ್ಸ್‌ಗಳನ್ನು ಕಟ್ಟಡ ನಿರ್ಮಾಣಕ್ಕೆ ಬಳಸಬಹುದು, ಒಗಟೊಂದನ್ನು ಅದ್ಭುತ ಕತೆಯಾಗಿ ಪರಿವರ್ತಿಸಬಹುದು ಮತ್ತು ಡೊಮಿನೋಸ್‌ಗಳನ್ನು ಉದ್ದವಾದ ರೈಲು ಗಾಡಿಯಾಗಿ ಬದಲಿಸಬಹುದು.

ಈ ಆಟಗಳಲ್ಲಿ ಹೆಚ್ಚಿನವನ್ನು ಕಡಿಮೆ ವೆಚ್ಚದ ವಸ್ತುಗಳಿಂದ ನಿರ್ಮಿಸಬಹುದು. ನಮ್ಮ ಶಿಕ್ಷಕರು ಇದನ್ನು ರೂಢಿಸಿಕೊಂಡಿದ್ದಾರೆ ಮತ್ತು ಈ ಕ್ರೀಡೆಗಳನ್ನು ಬಳಸಿಕೊಂಡು, ತಮ್ಮ ವಿದ್ಯಾರ್ಥಿಗಳಲ್ಲಿ ಕಲಿಕೆಯನ್ನು ಬಲಪಡಿಸುತ್ತಿದ್ದಾರೆ.

ಶಿಕ್ಷಕರು ಅಭಿವೃದ್ಧಿಪಡಿಸಿದ ಒಳಾಂಗಣ ಕ್ರೀಡೆಗಳು:

ನಮ್ಮ ಸಕ್ರಿಯ ಶಿಕ್ಷಕಿಯರಲ್ಲಿ ಒಬ್ಬರಾದ ಶ್ರೀಮತಿ ಜಯಮ್ಮ, ಸುಲಭವಾಗಿ ದೊರೆಯುವ ಕಡಿಮೆ ಬೆಲೆಯ ವಸ್ತುಗಳನ್ನು ಬಳಸಿಕೊಂಡು ಹಲವು ಆಟಗಳನ್ನು ಅಭಿವೃದ್ಧಿಪಡಿಸಿದ್ದಾರೆ.



ಚೆಂಡುಗಳು ಮತ್ತು ಸಂಖ್ಯೆಗಳ ಹೋಲಿಕೆ:

ಈ ಆಟದಲ್ಲಿ ವಿದ್ಯಾರ್ಥಿಗಳು ಹಲಗೆ(ಫಲಕ)ಗೆ ಅಳವಡಿಸಿರುವ ಥರ್ಮೋಕೋಲ್‌ನ ಚೆಂಡುಗಳ ಸಂಖ್ಯೆಯನ್ನು ಬಾಟಲಿಗೆ ಅಳವಡಿಸಿರುವ ಮುಚ್ಚಳಗಳ ಸಂಖ್ಯೆಗೆ ಹೋಲಿಸಬೇಕಾಗುತ್ತದೆ. ಜಯಮ್ಮ ಅವರ ಮಾತಿನಲ್ಲೇ ಹೇಳಬಹುದಾದರೆ, "ನಾನು ನನ್ನ ವಿದ್ಯಾರ್ಥಿಗಳು ದೃಢವಾದ ವಸ್ತುಗಳನ್ನು ಬಳಸಿಕೊಂಡು, ಲೆಕ್ಕ ಮಾಡುವುದನ್ನು ಕಲಿಯಲು ನೆರವಾಗಲು ಹಾಗೂ ಬೆರಳುಗಳಿಗೆ ಬರವಣಿಗೆಯ ಹಿಡಿತ ಸಿಗಲು ವ್ಯಾಯಾಮ ಆಗಲಿ ಎಂದು ಈ ಆಟವನ್ನು ವಿನ್ಯಾಸಗೊಳಿಸಿದ್ದೇನೆ". ಏಕೆ ಇಂಥ ಕ್ರೀಡೆಗಳನ್ನು ಅಭಿವೃದ್ಧಿಗೊಳಿಸುತ್ತೇನೆ ಎಂದು ಅವರು ವಿವರಿಸುವುದು ಹೀಗೆ, "ನಾನು ಇಂಥ ಸಾಧನಗಳನ್ನು ಕಲಿಕಾ ಸಹಾಯಕಗಳಾಗಿ ಅಭಿವೃದ್ಧಿಪಡಿಸುತ್ತಲೇ ಇರುತ್ತೇನೆ. ಏಕೆಂದರೆ, ಇವುಗಳಲ್ಲಿ ಮಕ್ಕಳು ತೊಡಗಿಸಿಕೊಳ್ಳುವುದರಿಂದ, ನನ್ನ ಕೆಲಸ ಸುಲಭವಾಗುತ್ತದೆ ಮತ್ತು ನಾನು ಅವರೊಟ್ಟಿಗೆ ಇಲ್ಲದಿದ್ದರೂ, ತಾವು ಕಲಿತದ್ದನ್ನು ದೃಢಪಡಿಸಿಕೊಳ್ಳಲು ಇವು ನೆರವಾಗಲಿವೆ".

ಈ ಕ್ರೀಡೆಯ ಕಲಿಕಾ ಫಲಿತಾಂಶಗಳೆಂದರೆ,

* ಸಂಖ್ಯೆಗಳೊಂದಿಗೆ ವಸ್ತುಗಳನ್ನು ಸಂಯೋಜಿಸುವುದು
* ಶೂನ್ಯದ ಪರಿಕಲ್ಪನೆಯನ್ನು ಅರ್ಥ ಮಾಡಿಕೊಳ್ಳುವುದು
* ಶಬ್ದ ಭಂಡಾರದ ಅಭಿವೃದ್ಧಿ (ಅವಲೋಕನಗಳ ವಿವರಣೆಯಿಂದ)
* ಒಂದರಿಂದ ಹತ್ತರವರೆಗೆ ಎಣಿಕೆ

ಪಜ಼ಲ್‌ಗಳು / ಓರೆಕೋರೆ ಚಿತ್ರಗಳು

ಪಜ಼ಲ್‌ಗಳು ನವಿರಾದ ಚಲನೆ, ಸಮಸ್ಯೆ ಬಗೆಹರಿಸುವ ಹಾಗೂ ವಿಂಗಡಿಸುವ ಕೌಶಲಗಳನ್ನು ಅಭಿವೃದ್ಧಿಪಡಿಸುವ ಅತ್ಯುತ್ತಮ ಸಾಧನಗಳು. ಶಿಕ್ಷಕಿ ಜಯಮ್ಮ ಮಾರುಕಟ್ಟೆಯಲ್ಲಿ ಲಭ್ಯವಿರುವ ಪ್ರತಿಷ್ಠಿತ ಕಂಪನಿಗಳ ಪಜ಼ಲ್‌ಗಳನ್ನು ಪರಿಶೀಲಿಸಿ, ಕಡಿಮೆ ಬೆಲೆಯ ಸಾಧನಗಳನ್ನು ಬಳಸಿಕೊಂಡು, ತಮ್ಮದೇ ಆದ ಆವೃತ್ತಿಯನ್ನು ಸೃಷ್ಟಿಸುತ್ತಾರೆ. ಇವುಗಳನ್ನು ಮಾತನಾಡುವುದನ್ನು ಉತ್ತೇಜಿಸಲು, ಶಬ್ಧಭಂಡಾರವನ್ನು ಅಭಿವೃದ್ಧಿಪಡಿಸಲು ಹಾಗೂ ಮಕ್ಕಳು ಆಲೋಚಿಸುವಂತೆ ಮಾಡಲು ಪರಿಣಾಮಕಾರಿಯಾಗಿ ಬಳಸಲಾಗುತ್ತದೆ. ಈ ಪಜ಼ಲ್‌ಗಳ ಸುತ್ತ ಕತೆಗಳನ್ನು ಸೃಷ್ಟಿಸಲು ಮಕ್ಕಳನ್ನು ಪ್ರೋತ್ಸಾಹಿಸಬಹುದು.



ಡೊಮಿನೋಗಳು:

ಡೊಮಿನೋದ ಸಾಮಾನ್ಯ ಆಟವು ಆಯತಾಕಾರದ ಹಲಗೆಗಳನ್ನು ಹೊಂದಿದ್ದು, ಹಲಗೆಗಳ ಹಿಂದೆ ವೈಶಿಷ್ಟ್ಯರಹಿತ ಅಥವಾ ಖಾಲಿ ಇಲ್ಲವೇ ಸಾಮಾನ್ಯ ವಿನ್ಯಾಸವೊಂದು ಇರುತ್ತದೆ. ಈ ಹಲಗೆಗಳ ಮೇಲೆ ಚುಕ್ಕಿಗಳ ಬದಲು ಸರಿಸಮನಾದ ಚಿತ್ರಗಳನ್ನು ಮುದ್ರಿಸಬಹುದು. ಈ ಆಟವನ್ನು ಒಬ್ಬರು ಇಲ್ಲವೇ 3 ರಿಂದ 4 ಆಟಗಾರರ ಗುಂಪು ಆಡಬಹುದು.

ಜಯಮ್ಮ ನಮ್ಮ ಟಿಎಲ್‌ಸಿಯಲ್ಲಿ ಲಭ್ಯವಿದ್ದ ಪೊಟ್ಟಣಗಳ ತ್ಯಾಜ್ಯ ವಸ್ತುಗಳನ್ನು ಬಳಸಿಕೊಂಡು ಡೊಮಿನೋಗಳನ್ನು ತಯಾರಿಸಿದರು. ಈ ಡೊಮಿನೋಗಳ ಮೇಲೆ ಇಂಗ್ಲಿಷ್‌ನ ನಲಿಕಲಿ ಸರಣಿಯ ಅಕ್ಷರಗಳನ್ನು ಮುದ್ರಿಸಬಹುದಾಗಿತ್ತು. ಹೊಂದಿಸುವುದು ಹಾಗೂ ವಿಂಗಡಿಸುವ ಕೌಶಲವಲ್ಲದೆ, ಈ ಆಟದಿಂದ ಶಬ್ದಭಂಡಾರವನ್ನು ಪರಿಣಾಮಕಾರಿಯಾಗಿ ಅಭಿವೃದ್ಧಿಪಡಿಸಬಹುದು.

ಮೀನು ಹಿಡಿಯಲು ಹೋಗೋಣ:

ಈ ಆಟದಲ್ಲಿ ಮಕ್ಕಳು, ಶಿಕ್ಷಕ ಅಥವಾ ಸ್ನೇಹಿತರು ಹೇಳಿದ ಹೆಸರಿನ ಮೀನನ್ನು ಹಿಡಿಯಬೇಕು. ಯಾರು ಗರಿಷ್ಠ ಸಂಖ್ಯೆಯ ಮೀನುಗಳನ್ನು ಹಿಡಿಯುತ್ತಾರೋ ಅವರು ಗೆದ್ದಂತೆ. ಜಯಮ್ಮ ಆಟವನ್ನು ಆಸಕ್ತಿದಾಯಕವಾಗಿಸಲು ಕಾರ್ಡ್‌ಗಳಿಗೆ ಅಯ-ಸ್ಕಾಂತಗಳನ್ನು ಅಂಟಿಸಿದ್ದರು. ಈ ಅಯಸ್ಕಾಂತಗಳನ್ನು ವಿದ್ಯಾರ್ಥಿಗಳು ಬಳಸಿ ಎಸೆದ ರಿಮೋಟ್ ನಿಯಂತ್ರಿತ ಕಾರುಗಳಿಂದ ಅವರು ಸಂಗ್ರಹಿಸಿದ್ದರು.

ಯಾರು ಮೊದಲು ತುಂಬಿಸುತ್ತಾರೆ?:

ಇನ್ನೊಬ್ಬರು ಶಿಕ್ಷಕಿ ಶ್ರೀಮತಿ ಅಣ್ಣಮ್ಮ, ತನ್ನ ವಿದ್ಯಾರ್ಥಿಗಳು ಎಣಿಕೆಯನ್ನು ಅಭ್ಯಾಸ ಮಾಡಲು ನೆರವಾಗುವ ಆಟವನ್ನು ಅಭಿವೃದ್ಧಿಪಡಿಸಿದ್ದರು. ಎದುರುಬದುರು ಕುಳಿತ ಇಬ್ಬರು ವಿದ್ಯಾರ್ಥಿಗಳು ಈ ಆಟ ಆಡುತ್ತಾರೆ. ಇಬ್ಬರೂ ಒಬ್ಬರ ಬಳಿಕ ಇನ್ನೊಬ್ಬರು ಪಗಡೆ ಅಥವಾ ಕವಡೆಯನ್ನು ಎಸೆದು, ಬಂದ ಸಂಖ್ಯೆಯಷ್ಟು ಬೀಜ ಇಲ್ಲವೇ ಕಲ್ಲುಗಳನ್ನು ಪೆಟ್ಟಿಗೆಯಲ್ಲಿ ತುಂಬುತ್ತಾರೆ. ಯಾರು ಮೊದಲು ಪೆಟ್ಟಿಗೆಯನ್ನು ತುಂಬುತ್ತಾರೋ ಅವರು ಗೆಲ್ಲುತ್ತಾರೆ.

"ಇದು ಮಕ್ಕಳನ್ನು ತೊಡಗಿಸಿಕೊಂಡು, ಲೆಕ್ಕ ಮಾಡುವುದನ್ನು ಅಭ್ಯಾಸ ಮಾಡಿಸುತ್ತದೆ: ಕಲಿಕೆಯನ್ನು ಶೀಘ್ರಗೊಳಿಸುತ್ತದೆ ಹಾಗೂ ನಲಿಕಲಿಯ ಉದ್ದೇಶವಾದ ಸಹಪಾಠಿಗಳೊಟ್ಟಿಗೆ ಕಲಿಕೆಯನ್ನು ಬೆಂಬಲಿಸುತ್ತದೆ. ಈ ಆಟದಿಂದ ನಮ್ಮ ಮಕ್ಕಳು ತಮ್ಮದೇ ಜ್ಞಾನವನ್ನು ನಿರ್ಮಿಸಿಕೊಳ್ಳುವ ಸಾಮರ್ಥ್ಯಗಳಿಸಿದ್ದಾರೆ ಮತ್ತು ಗಣಿತಶಾಸ್ತ್ರದ ಶಬ್ದ ಭಂಡಾರವನ್ನು ಅಭಿವೃದ್ಧಿಪಡಿಸಿಕೊಂಡಿದ್ದಾರೆ. ಮಾಮೂಲಿ ಬೋಧನೆಯಿಂದ ಇದನ್ನು ಮಾಡಲು ನನಗೆ ಸಾಧ್ಯವಾಗುತ್ತಿರಲಿಲ್ಲ".

ಪದಗಳನ್ನು ಸೃಷ್ಟಿಸೋಣ:

ಈ ಆಟವನ್ನು ಅಭಿವೃದ್ಧಿಪಡಿಸಿದವರು ಶಿಕ್ಷಕಿ ಶ್ರೀಮತಿ ತುಳಸಿ. ಇದರಲ್ಲಿ ಮಕ್ಕಳು ಹೊಸ ಪದಗಳನ್ನು ಸೃಷ್ಟಿಸಲು ಅಕ್ಷರಗಳನ್ನು ಮುದ್ರಿಸಿರುವ ಬಣ್ಣ ಬಣ್ಣದ ಪಜ಼ಲ್‌ಗಳ ತುಣುಕುಗಳನ್ನು ಬಳಸುತ್ತಾರೆ.





ಕಲಿಕೆಯನ್ನು ಉತ್ತೇಜಿಸುವ ಒಳಾಂಗಣ ಕ್ರೀಡೆಗಳು:

ಹೆಸರು	ಆಡುವುದು ಹೇಗೆ?	ಕೌಶಲಗಳು
ಅಳಗುಳಿ ಮಣೆ	ಅಳಗುಳಿ ಮಣೆ ಎಂಬುದು ಕರ್ನಾಟಕ ಮೂಲದ ಅಮೂರ್ತ ಕಾರ್ಯತಂತ್ರ ಆಧಾರಿತ ಹಲಗೆ ಆಟ. ಆಟದ ಹೆಸರು ಅದಕ್ಕೆ ಬಳಸುವ ಹಲಗೆಯನ್ನು ಸೂಚಿಸುತ್ತದೆ – ರಂಧ್ರಗಳಿರುವ ಮರದ ತುಂಡು. ಹುಣಿಸೆ ಬೀಜ ಬಳಸಿ ಆಡಲಾಗುತ್ತದೆ. ಒಂದು ವೇಳೆ ಮರದ ತುಂಡು ಲಭ್ಯವಿಲ್ಲದಿದ್ದರೆ, ನೆಲದ ಮೇಲೆ ವೃತ್ತಗಳನ್ನು ಬರೆದು ಆಡಬಹುದು.	ಈ ಆಟದ ಮೂಲಕ ತಮ್ಮ ಸರತಿಗಾಗಿ ಕಾಯುವುದು, ಲೆಕ್ಕ ಮಾಡುವುದು, ಕಳೆಯುವುದನ್ನು ಪರಿಣಾಮಕಾರಿಯಾಗಿ ಪರಿಚಯಿಸಬಹುದು ಹಾಗೂ ಅಭಿವೃದ್ಧಿಪಡಿಸಬಹುದು. ಮಕ್ಕಳು ಸಂಖ್ಯೆಗಳ ಒಟ್ಟುಗೂಡಿಸುವಿಕೆ ಪರಿಕಲ್ಪನೆಯನ್ನು ಕಂಡುಕೊಳ್ಳಲು ಹಾಗೂ ಅನುಭವಿಸಲು ಈ ಆಟ ನೆರವಾಗಲಿದೆ. ಉದಾಹರಣೆಗೆ, ಬೀಜಗಳನ್ನು ಎರಡು, ಮೂರು, ನಾಲ್ಕು, ಐದು, 10 ಇತ್ಯಾದಿಗಳು ವಿದ್ಯಾರ್ಥಿಗಳ ಹಂಚಲು ಮಕ್ಕಳಿಗೆ ಹೇಳಬಹುದು. ಬೀಜವನ್ನು ನಾನಾ ಗುಂಪುಗಳಲ್ಲಿ ಹಂಚುವ ಮೂಲಕ ಪ್ರತಿಯೊಂದನ್ನೂ ಎಣಿಸುವ ಬದಲು ಒಟ್ಟಿಗೆ ವೇಗವಾಗಿ ಎಣಿಸಬಹುದು.
ಕವಡೆ	ಇದು ನಾಲ್ಕು ಮಂದಿ ಆಡುವ ಸಾಂಪ್ರದಾಯಿಕ ಆಟ. ಆಟಗಾರರು ತಮ್ಮ ಕಾಯಿಗಳನ್ನು ಬೇರೆ ಆಟಗಾರರು ಹೊಡೆಯದಂತೆ ನೋಡಿಕೊಳ್ಳಬೇಕು. ಹುಣಸೆ ಅಥವಾ ಇನ್ನಿತರ ಬೀಜಗಳನ್ನು ಬಳಸಲಾಗುತ್ತದೆ. ಎಲ್ಲ ಕಾಯಿಗಳನ್ನು ಹಣ್ಣು ಮಾಡಿದವನು ವಿಜಯಿಯಾಗುತ್ತಾನೆ	ಈ ಆಟದ ಮೂಲಕ ತಮ್ಮ ಸರದಿಗಾಗಿ ತಾಳ್ಮೆಯಿಂದ ಕಾಯುವುದು, ಸಮಸ್ಯೆ ಬಗೆಹರಿಸುವುದು, ನಿರ್ಧಾರ ತೆಗೆದುಕೊಳ್ಳುವುದು, ಎಣಿಸುವುದು, ಕಳೆಯುವುದನ್ನು ಪರಿಣಾಮಕಾರಿಯಾಗಿ ಪರಿಚಯಿಸಬಹುದು ಹಾಗೂ ಅಭಿವೃದ್ಧಿಪಡಿಸಬಹುದು. ಸಮ ಮತ್ತು ಬೆಸ ಸಂಖ್ಯೆಯ ಪರಿಕಲ್ಪನೆಯನ್ನು ಅಭಿವೃದ್ಧಿಪಡಿಸಲು ಬಳಸಬಹುದು.
ಜೆಂಗಾ	ಇದರಲ್ಲಿ 54 ಬ್ಲಾಕ್‌ಗಳಿಂದ ನಿರ್ಮಿಸಿದ ಗೋಪುರದಿಂದ ಆಟಗಾರರು ಒಮ್ಮೆ ಒಂದು ಬ್ಲಾಕ್‌ಅನ್ನು ತೆಗೆಯುತ್ತಾರೆ. ಆಟವನ್ನು ಒಬ್ಬರು ಅಥವಾ 2-3 ಜನ ಆಡಬಹುದು. ಇಬ್ಬರು ಆಟವಾಡಿದಾಗ ಯಾರು ಹೆಚ್ಚು ಬ್ಲಾಕ್‌ಗಳನ್ನು ತೆಗೆಯುತ್ತಾರೋ ಅವರು ವಿಜೇತರಾಗುತ್ತಾರೆ. ಆಟವನ್ನು ಸ್ಥಳೀಯವಾಗಿ ಲಭ್ಯವಿರುವ ಮರದ ತುಂಡುಗಳನ್ನು ಬಳಸಿ ಆಡಬಹುದು. ಜೆಂಗಾದಿಂದ ನಾನಾ ಆಕೃತಿಗಳನ್ನು ನಿರ್ಮಿಸಲು ಮಕ್ಕಳು ಇಷ್ಟಪಡುತ್ತಾರೆ	ಆಟದಿಂದ ಚಲನ ಕೌಶಲ, ತಾಳ್ಮೆ ಹಾಗೂ ಗಮನ ಕೇಂದ್ರೀಕರಿಸುವಿಕೆಯನ್ನು ಕಲಿಯಬಹುದು. ತತ್‌ಕ್ಷಣ ಪ್ರತಿಕ್ರಿಯಿಸುವುದನ್ನು ನಿಯಂತ್ರಿಸಲು ನೆರವಾಗುತ್ತದೆ. ಜೆಂಗಾ ತುಣುಕುಗಳನ್ನು ಗುಂಪುಗೂಡಿಸುವಿಕೆ, ಲೆಕ್ಕಿಸುವುದು ಹಾಗೂ ಆಕೃತಿಗಳ ಬಗ್ಗೆ ತಿಳಿಸಲು ಬಳಸಬಹುದು. ಇದನ್ನು ಬಳಸಿ ಮಾಡಿದ ಕೃತಿಗಳು ಹೆಚ್ಚು ಕಾಲ ಬಾಳುವಂತೆ ಜೋಡಿಸುವ ಕಾರ್ಯತಂತ್ರವನ್ನು ಮಕ್ಕಳು ಕಲಿಯುತ್ತಾರೆ ಮತ್ತು ಹುಡುಕಿಕೊಳ್ಳುತ್ತಾರೆ.
ಹೊಂದಾಣಿಕೆಯಾಗುವ ಬ್ಲಾಕ್‌ಗಳು / ತುಂಡುಗಳು	ಆಟವಾಡಲು ಮಕ್ಕಳಿಗೆ ನಾನಾ ಆಕಾರಗಳು ಹಾಗೂ ಅಕ್ಷರಗಳನ್ನು ಮುದ್ರಿಸಿದ ತುಣುಕುಗಳನ್ನು ನೀಡಬಹುದು	ಆಟದಿಂದ ಚಲನ ಕೌಶಲ, ವಿಭಾಗಿಸುವುದು, ಶಬ್ದಭಂಡಾರ, ಧ್ವನಿಸಂಕೇತಗಳ ಅರಿವನ್ನು ಅಭಿವೃದ್ಧಿಪಡಿಸಬಹುದು.
ಹೊಂದಾಣಿಕೆಯಾಗುವ ಫಲಕ	ನಾನಾ ವಸ್ತುಗಳ ಚಿತ್ರವನ್ನು ಮುದ್ರಿಸಿರುವ 50-60 ಫಲಕಗಳನ್ನು ಮಕ್ಕಳಿಗೆ ನೀಡಿ. ಫಲಕಗಳನ್ನು ತಲೆಕೆಳಗಾಗಿ ಇರಿಸಿ ಮತ್ತು ಆಟಗಾರರು ಹಿಂದಿನ ಫಲಕಗಳಲ್ಲಿರುವ ಮುದ್ರಿತ ಚಿತ್ರಕ್ಕೆ ಹೊಂದಾಣಿಕೆಯಾಗುವ ಫಲಕಗಳನ್ನು ಎತ್ತುತ್ತ ಇರಲಿ	ಫಲಕಗಳಿಂದ ಆಕೃತಿಗಳ ಹೋಲಿಸುವಿಕೆಯನ್ನು ಅಭಿವೃದ್ಧಿಪಡಿಸಬಹುದು.
ವಾಹನದಟ್ಟಣೆಯಿಂದ ಕಾರು ಹೊರತೆಗೆಯುವುದು	ಈ ಹಲಗೆ ಆಟವನ್ನು ಬಳಸಿಕೊಂಡು ಹಲವು ಒಗಟುಗಳನ್ನು ಆಡಬಹುದು. ಆಟಗಾರರು ವಾಹನದಟ್ಟಣೆಯಿಂದ ಕಾರು ಹೊರತೆಗೆಯಲು ನಾನಾ ಕಾರ್ಯತಂತ್ರಗಳನ್ನು ರೂಪಿಸಬೇಕಾಗುತ್ತದೆ. ಆಟದಕಾರಿನ ಬದಲು ಮರ ಇಲ್ಲವೇ ಕಾರ್ಡ್ ಬೋರ್ಡ್‌ನ ತುಂಡುಗಳನ್ನು ಬಳಸಬಹುದು	ಕಾರ್ಯತಂತ್ರ ರೂಪಿಸುವಿಕೆ, ಸಮಸ್ಯೆ ಬಗೆಹರಿಸುವಿಕೆ ಹಾಗೂ ನಿರ್ಧಾರ ತೆಗೆದುಕೊಳ್ಳುವ ಕೌಶಲಗಳನ್ನು ಅಭಿವೃದ್ಧಿಪಡಿಸಬಹುದು.

ಕೃತಜ್ಞತೆ:
ಈ ಲೇಖನ ನಮ್ಮ ಶಿಕ್ಷಕರೊಂದಿಗೆ ನಡೆಸಿದ ಸಂವಾದದ ಫಲ. ಶಿಕ್ಷಕಿಯರಾದ ಶ್ರೀಮತಿ ಜಯಮ್ಮ, ಶ್ರೀಮತಿ ಅಣ್ಣಮ್ಮ ಹಾಗೂ ಶ್ರೀಮತಿ ತುಳಸಿ ಅವರಿಗೆ ಕೃತಜ್ಞನಾಗಿದ್ದೇನೆ. ಫಲಕಗಳ ಆಟಕ್ಕೆ ನನ್ನನ್ನು ಪರಿಚಯಿಸಿದ ಸೋದರಿ ಆಶಾ ಹಾಗೂ ಸಂಬಂಧಿ ಸಹನಾಗೆ ವಿಶೇಷ ಧನ್ಯವಾದಗಳು.



ಅಕ್ಷತಾ ಎಸ್. ಬೆಳ್ಳೂಡಿ ಅಜೀಂ ಪ್ರೇಮ್‌ಜಿ ಫೌಂಡೇಷನ್‌ನ ಕೊಪ್ಪಳ ಜಿಲ್ಲಾ ಸಂಪನ್ಮೂಲ ಕೇಂದ್ರದ ಸಂಪನ್ಮೂಲ ವ್ಯಕ್ತಿ. ಅರ್ಥಪೂರ್ಣ ಕಲಿಕಾ ವಿಧಾನವನ್ನು ಅರ್ಥೈಸಲು ಅವರು ಪರ್ಯಾಯ ಶಾಲೆಗಳಲ್ಲಿ ಕಾರ್ಯ ನಿರ್ವಹಿಸಿದ್ದಾರೆ. ಅನುಭವಾತ್ಮಕ ಕಲಿಕೆ, ಪ್ರವಾಸ ಹಾಗೂ ಆದಿವಾಸಿಗಳ ದೇಸೀ ಜ್ಞಾನ ವ್ಯವಸ್ಥೆಯ ಅನ್ವೇಷಣೆ ಅವರ ಆಸಕ್ತಿಗಳು. ಅವರನ್ನು Akshatha.belludi@ azimpremjifoundation.org ಮೂಲಕ ಸಂಪರ್ಕಿಸಬಹುದು

ಅನುವಾದ: **ಮಾಧವ ಐತಾಳ** । ಪರಿಶೀಲನೆ: **ಲತಾ ಕೆ.ಸಿ.**

ಆಟದ ಅವಧಿ ಎಂದರೆ ಪವಿತ್ರವಾದ, ನಂಟು ಬೆಸೆಯುವ ಒಂದು ಚಮತ್ಕಾರಿಕ ಸಮಯ. ಖಚಿತವಾಗಿಯೂ, ಒಂದು ದಿನದ ಅವಧಿಯಲ್ಲಿ ಒಂದಲ್ಲ ಒಂದು ಮಗು ಆಟವಾಡುವ ಯೋಚನೆಯನ್ನು ವ್ಯಕ್ತಪಡಿಸುತ್ತದೆ. ಯಾಕೆಂದರೆ, ಆಟದಿಂದಾಗಿ ಅವರ ಕ್ರಿಯಾಶೀಲತೆಯು ಪ್ರಚೋದಿತವಾಗಿದ್ದು, ಒಳಗೊಳಗೇ ಪುಟಿಯುತ್ತಿರುತ್ತದೆ. ಅಂತಹ ಸಮಯದಲ್ಲಿ, 'ಹಗಲುಗನಸು ಬಿಟ್ಟು ಲಕ್ಷ್ಯವಿಡಿ' ಎಂದು ಹೇಳುವ ಆತುರಕ್ಕೆ ಬೀಳಬೇಡಿ. ಅವರ ಕಲ್ಪನೆಗಳನ್ನು ಮುಂದಿನ ಆಟದ ಅವಧಿಗೆ ಮೀಸಲಿಟ್ಟುಕೊಳ್ಳುವಂತೆ ನಯವಾಗಿ ಹೇಳಿ

– ವೆಲೆಂಟಿನಾ ತ್ರಿವೇದಿ, ಆಟದ ಮೂಲಕ ಭಾವನಾತ್ಮಕ ಬೆಳವಣಿಗೆ, ಪು. 106